Basavakalyana Development Board constituted by Government of Karnataka.

Thanking you,

Your faithfully
Sd/-
Director
Department of Tourism

Copy submitted to;

1. The special Representative of Karnataka, Karnataka Bhavan, New Delhi for kind information.
2. The Principal Secretary to Government, Department of Tourism, Bangalore for kind information.
3. The Special Officer, Basavakalyana Development Board and Managing Director, Karnataka Power Corporation Ltd., Bangalore for kind information.

ಬೀದರ್ ಜಿಲ್ಲೆಯಲ್ಲಿ ಕ್ರೀಡಾಂಗಣ ನಿರ್ಮಾಣ

42(181): ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ): ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಹಾಗೂ ಯುವಜನ ಸೇವಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೀದರ್ ಜಿಲ್ಲೆಯಲ್ಲಿ ಇರುವ ಕ್ರೀಡಾಂಗಣಗಳ ಸಂಖ್ಯೆ ಎಷ್ಟು?

ಆ) ಬೀದರ್ ಜಿಲ್ಲೆಯಲ್ಲಿ ಹೊಸದಾಗಿ ಕ್ರೀಡಾಂಗಣಗಳನ್ನು ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ?

ಇ) ಈ ಭಾಗದ ಕ್ರೀಡಾಪಟುಗಳಿಗೆ ಅನುಕೂಲ ಮಾಡಿಕೊಡುವ ಭಾಲ್ಕಿಯಲ್ಲಿ ಕ್ರೀಡಾಂಗಣವನ್ನು ನಿರ್ಮಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಜಿ.ಜನಾರ್ಧನ ರೆಡ್ಡಿ: (ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಹಾಗೂ ಯುವಜನ ಸೇವಾ ಸಚಿವರು):

ಅ) ಬೀದರ್ ಜಿಲ್ಲೆಯಲ್ಲಿರುವ ಕ್ರೀಡಾಂಗಣ ಸಂಖ್ಯೆ 3 (ಬೀದರ್, ಔರಾದ್ ಮತ್ತು ಹುಮನಾಬಾದ್‌ಗಳಲ್ಲಿ)

ಆ) ಇಲ್ಲ.

ಇ) ಕ್ರೀಡಾಂಗಣ ನಿರ್ಮಿಸಲು ಅಗತ್ಯವಾದ ನಿವೇಶನ ಲಭ್ಯವಿರುವುದಿಲ್ಲ. ನಿವೇಶನ ಲಭ್ಯವಾದ ಕೂಡಲೇ ಕ್ರಮ ತೆಗೆದು ಕೊಳ್ಳಲಾಗುವುದು.

ಪ್ರವಾಸೋದ್ಯಮ ತಾಣಗಳ ಅಭಿವೃದ್ಧಿ

43(182): ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ): ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಹಾಗೂ ಯುವಜನ ಸೇವಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೀದರ್ ಜಿಲ್ಲೆಯ ಯಾವ ಯಾವ ಸ್ಥಳಗಳನ್ನು ಪ್ರವಾಸಿ ತಾಣಗಳೆಂದು ಗುರುತಿಸಲಾಗಿದೆ?

ಆ) ಈ ತಾಣಗಳನ್ನು ಅಭಿವೃದ್ಧಿಪಡಿಸಲು ರಾಜ್ಯ ಸರ್ಕಾರ ಕೇಂದ್ರ ಸರ್ಕಾರ ಕಳೆದ ಎರಡು ವರ್ಷಗಳ ಅವಧಿಯಲ್ಲಿ ಎಷ್ಟೆಷ್ಟು ಹಣವನ್ನು ವೆಚ್ಚ ಮಾಡಲಾಗಿದೆ?

ಇ) ಈ ಹಣದಿಂದ ಜಿಲ್ಲೆಯ ಯಾವ ಯಾವ ಪ್ರವಾಸಿ ತಾಣದಲ್ಲಿ ಯಾವ ಯಾವ ಅಭಿವೃದ್ಧಿ ಕಾಮಗಾರಿಗಳನ್ನು ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರದ ಅನುದಾನದಿಂದ ಕೈಗೊಳ್ಳಲಾಗಿದೆ?

ಈ) ಬಾಕಿ ಎಷ್ಟು ಪ್ರಸ್ತಾವನೆಗಳು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಮುಂದೆ ಇವೆ? (ಪೂರ್ಣ ವಿವರ ನೀಡುವುದು);

ಶ್ರೀ ಜಿ. ಜನಾರ್ಧನ ರೆಡ್ಡಿ (ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಹಾಗೂ ಯುವಜನ ಸೇವಾ ಸಚಿವರು)

ಅ) ಬೀದರ್ ಜಿಲ್ಲೆಯ ಬೀದರ್ ನಗರ, ಹುಮ್ನಾಬಾದ್, ಜಲಸಾಂಗ್ವಿ, ಬಸವಕಲ್ಯಾಣ, ನಾರಾಯಣಪುರ, ಭಾಲ್ಕಿಯ ಕಾರಂಜಾ ಜಲಾಶಯಗಳನ್ನು ಪ್ರವಾಸಿ ತಾಣವಾಗಿ ಗುರುತಿಸಲಾಗಿದೆ.

ಆ) ಬೀದರ್ ನಗರದಲ್ಲಿ ಪ್ರವಾಸಿ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ಕೇಂದ್ರ ಸರ್ಕಾರವು ಎ.ಸಿ.ಎ. ಅನುದಾನದಡಿ ರೂ. 136.00 ಕೋಟಿಗಳಿಗೆ ಅನುಮೋದನೆ ನೀಡಿ ಕೇಂದ್ರದ ಕಂತಾಗಿ ರೂ.40.80. ಕೋಟಿಗಳನ್ನು ಬಿಡುಗಡೆ ಮಾಡಿರುತ್ತದೆ. ಹೀಗಾಗಿ ಬೀದರ್ ನಗರದಲ್ಲಿ ಮೂಲಭೂತ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲು 2008–09ನೇ ಸಾಲಿನಲ್ಲಿ ರೂ. 35.00 ಕೋಟಿಗಳನ್ನು 2009–10ನೇ ಸಾಲಿನಲ್ಲಿ ರೂ.40.00 ಕೋಟಿಗಳನ್ನು ಜಿಲ್ಲಾಧಿಕಾರಿಗಳು, ಬೀದರ್‌ರವರಿಗೆ ಬಿಡುಗಡೆ ಮಾಡಲಾಗಿದೆ. ಬಹುತೇಕ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ.

ಬೀದರ್ ಕೋಟೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಪ್ರವಾಸಿ ಸೌಲಭ್ಯಗಳನ್ನು ಕಲ್ಪಿಸಲು ಕೇಂದ್ರ ಸರ್ಕಾರವು ರೂ.318.17 ಲಕ್ಷಗಳ ಅಂದಾಜು ಯೋಜನೆಗೆ ಅನುಮೋದನೆ ನೀಡಿರುತ್ತದೆ. ಈ ಸಂಬಂಧ ಮೊದಲ ಕಂತಾಗಿ ರೂ. 40.00 ಲಕ್ಷಗಳನ್ನು ಜಿಲ್ಲಾಧಿಕಾರಿಗಳು ಬೀದರ್ ರವರಿಗೆ ಬಿಡುಗಡೆ ಮಾಡಲಾಗಿದೆ. ಜಿಲ್ಲಾಧಿಕಾರಿಗಳು ಯೋಜನೆಯನ್ನು

ಜಾರಿಗೊಳಿಸುತ್ತಿದ್ದಾರೆ. ಬೀದರ್ ಜಿಲ್ಲೆಯ ಚೌಕಾಂಡಿ ಹಾಗೂ ಅಸ್ಟೂರ್ ಟೂಮ್ಸ್ ಪ್ರದೇಶವನ್ನು ಪ್ರವಾಸಿ ತಾಣವಾಗಿ ಅಭಿವೃದ್ಧಿ ಪಡಿಸಲು ಕೇಂದ್ರ ಸರ್ಕಾರವು ರೂ.318.27 ಲಕ್ಷಗಳ ಅಂದಾಜು ಯೋಜನೆಗೆ ಅನುಮೋದನೆ ನೀಡಿರುತ್ತದೆ. ಈ ಸಂಬಂಧ ರೂ. 40.00 ಲಕ್ಷಗಳನ್ನು ಮೊದಲ ಕಂತಾಗಿ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದೆ.

ಬೀದರ್ ಜಿಲ್ಲೆಯ ವಿಲಾಸಪುರ ಟ್ಯಾಂಕ್ ಪ್ರದೇಶದಲ್ಲಿ ಜಂಗಲ್ ಲಾಡ್ಜಸ್ ಅಂಡ್ ರಿಸಾರ್ಟ್ ನಿರ್ಮಿಸಲು ಕೇಂದ್ರ ಸರ್ಕಾರವು ರೂ. 177.00 ಲಕ್ಷಗಳ ಯೋಜನೆಗೆ ಅನುಮೋದನೆ ನೀಡಿರುತ್ತದೆ. ಈ ಯೋಜನೆಯು ಪೂರ್ಣಗೊಳ್ಳುವ ಹಂತದಲ್ಲಿದೆ.

ಇ) ಪ್ರಶ್ನೆ (ಆ)ನಲ್ಲಿ ತಿಳಿಸಿರುವ ಉತ್ತರವನ್ನು ನೊಡಬಹುದು.

ಈ) ಬೀದರ್ ಜಿಲ್ಲೆಯ ಬಸವಕಲ್ಯಾಣದಲ್ಲಿರುವ ತ್ರಿಪುರಾಂತಕೇಶ್ವರ ಕೆರೆ ಹಾಗೂ ಬಂದವರ ಓಣಿ ಪ್ರದೇಶದಲ್ಲಿ ಪ್ರವಾಸಿ ಸೌಲಭ್ಯಗಳನ್ನು ಅಭಿವೃದ್ಧಿ ಪಡಿಸಲು ರೂ.500.00 ಲಕ್ಷಗಳ ಅಂದಾಜು ಮೊತ್ತದ ಯೋಜನೆಯು ಸೇರಿ ಕೇಂದ್ರ ಸರ್ಕಾರದ ಮುಂದೆ 11 ಯೋಜನೆಗಳು ಮಂಜೂರಾತಿಗಾಗಿ ಬಾಕಿ ಇವೆ. ವಿವರಗಳ ಪಟ್ಟಿ ಲಗತ್ತಿಸಿದೆ. ರಾಜ್ಯ ಸರ್ಕಾರದ ಮುಂದೆ ಇಂತಹ ಪ್ರಸ್ತಾವನೆಗಳು ಬಾಕಿ ಇರುವುದಿಲ್ಲ.

Proposals Pending in the Ministry of Tourism, Government of India, New Delhi

(Rs. in Lakhs)

Sl. No.	Projects	Estimated Cost	Submitted Date
1.	Tourist Infrastructure Facilities at Vanivilas Sagar Dam in Chitradurga District. Under Destination Development.	1062.00	02-05-2009
2.	Devt. of Rural Tourism at Gokarna in Uttarakannada Dist.	70.00	13-07-2009
3.	Devt. Of Infrastructure Facilities at Gaganachukki Area of Shivana Samudra Falls in Mandya Dist Under Destination Development.	907.71	21-12-2009
4.	Tourist Infrastructure works at Mysore Palace Premises under Destination Development.	571.00	04-01-2010

5.	CFA for Purchase of Water Sports Equipments in Kodagu District.	148.58	10-06-2010
6.	Tourist Infrastructure Facilities at Tripuranthakeshwara Kere and Bandavara Oni at Basavakalyana in Bidar District. Under Destination Development.	500.00	14-06-2010
7.	Supply of Furniture and Equipments to the Institute of Tourism and Hospitality Crafts Belur-release of funds reg.	100.00	17-06-2010
8.	Devt. of Tourism Infrastructure at Halurameshwara Hosadurga Taluk in Chitradurga District.	655.49	12-07-2010
9.	Devt. of Tourist Infrastructure at the world Heritage Site Pattadakal and Badami/Aihole in Bagalkot Dist under Mega Circuit.	146.27	12-07-2010
10.	Establishment of Institute of Hotel Management at Bellary in Karnataka.	1473.00	12-07-2010
11.	Devt. of Tourist Infrastructure Facilities in the religious circuits of Uttarakannada Dist (Gokarna, Idugunji, Murudeswara.	747.77	17-09-2009 & 23-02-2010

ಬೀದರ್ ಜಿಲ್ಲೆಯಲ್ಲಿ ವಿಮಾನ ನಿಲ್ದಾಣ ಸ್ಥಾಪನೆ

44(183): ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ): ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೀದರ್‌ನಲ್ಲಿ ವಿಮಾನ ನಿಲ್ದಾಣವನ್ನು ಸ್ಥಾಪಿಸುವ ಕೆಲಸ ಈಗ ಯಾವ ಹಂತದಲ್ಲಿದೆ. ಈ ವಿಷಯದಲ್ಲಿ ಇಲ್ಲಿಯವರೆವಿಗೆ ಸಾಧಿಸಿರುವ ಪ್ರಗತಿಯ ವಿವರಗಳೇನು?